ಕರ್ನಾಟಕ ಸರ್ಕಾರ

ಫೆಬ್ರವರಿ 14, 2017

# ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ ರಾಜ್ಯದ ರೈತರ ಬೆಳೆ ಸಾಲದ ಅರ್ಧ ಭಾಗವನ್ನು ಮನ್ನಾ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ : ಸಿದ್ದರಾಮಯ್ಯ



**ಬೆಂಗಳೂರು, ಫೆಬ್ರವರಿ 14:**

ಕಳೆದ ಎರಡು ವರ್ಷಗಳಿಂದ ರಾಜ್ಯವು ತೀವ್ರ ಬರಗಾಲದ ಬವಣೆಯಿಂದ ಬಳಲುತ್ತಿರುವ ಹಿನ್ನೆಲೆಯಲ್ಲಿ, ರಾಷ್ಟ್ರೀಕೃತ ಬ್ಯಾಂಕ್‌ಗಳು ಹಾಗೂ ವಾಣಿಜ್ಯ ಬ್ಯಾಂಕ್‌ಗಳಲ್ಲಿ ರೈತರು ಪಡೆದಿರುವ ಬೆಳೆ ಸಾಲದ ಅರ್ಧ ಭಾಗವನ್ನು ಮನ್ನಾ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಒಂದೆರಡು ದಿನಗಳಲ್ಲಿ ಪತ್ರ ಬರೆಯುವುದಾಗಿ ಮಂಗಳವಾರ ರಾಜ್ಯ ವಿಧಾನಸಭೆಯಲ್ಲಿ ತಿಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರವು ರಾಜ್ಯದ ಈ ಮನವಿಗೆ ಸ್ಪಂದಿಸಿದಲ್ಲಿ ಸಾಲದ ಉಳಿದ ಅರ್ಧ ಭಾಗವನ್ನು ರಾಜ್ಯ ಸರ್ಕಾರ ಮನ್ನಾ ಮಾಡಲಿದೆ ಎಂದು ಪ್ರಕಟಿಸಿದರು.

ರಾಜ್ಯಪಾಲರ ಭಾಷಣ ಕುರಿತ ವಂದನಾ ನಿರ್ಣಯ ಕುರಿತ ಚರ್ಚೆಯ ಮೇಲಿನ ಸದಸ್ಯರ ಟೀಕೆ–ಟಿಪ್ಪಣಿ ಹಾಗೂ ಸಲಹೆ ಸೂಚನೆಗಳಿಗೆ ಅವರು ಉತ್ತರಿಸುತ್ತಿದ್ದರು.

ಇಡೀ ರಾಷ್ಟ್ರದಲ್ಲೇ ಮೂರು ಲಕ್ಷ ರೂ.ವರೆಗೆ ಬಡ್ಡಿ ರಹಿತ ಅಲ್ಪಾವಧಿ ಸಾಲ ಯೋಜನೆಯನ್ನು ಜಾರಿಗೊಳಿಸಿದ ಹೆಗ್ಗಳಿಕೆ ತಮ್ಮ ಸರ್ಕಾರದ್ದು ಎಂದು ಬಣ್ಣಿಸಿದ ಅವರು ಪ್ರಸಕ್ತ ಸಾಲಿನಲ್ಲಿ 6.5 ಲಕ್ಷ ಹೊಸ ಫಲಾನುಭವಿಗಳೂ ಸೇರಿದಂತೆ 22.25 ಲಕ್ಷ ಫಲಾನುಭವಿಗಳಿಗೆ 10,500 ಕೋಟಿ ರೂ. ಸಾಲವನ್ನು ವಿತರಿಸಲಾಗಿದೆ. ಇದೇ ಅವಧಿಯಲ್ಲಿ ಸಹಕಾರಿ ಕ್ಷೇತ್ರದ ಬ್ಯಾಂಕ್‌ಗಳು ಮಾತ್ರವಲ್ಲದೆ ರಾಷ್ಟ್ರೀಕೃತ ಬ್ಯಾಂಕ್‌ಗಳು ಹಾಗೂ ವಾಣಿಜ್ಯ ಬ್ಯಾಂಕ್‌ಗಳಲ್ಲಿ ರಾಜ್ಯದ 56 ಲಕ್ಷ ರೈತರು ಪಡೆದಿರುವ ಸಾಲದ ಮೊತ್ತ 52,000 ಕೋಟಿ ರೂ ಆಗಿದೆ. ಅಂದರೆ ಸಹಕಾರಿ ಕ್ಷೇತ್ರದಲ್ಲಿ ಸಾಲ ಪಡೆದಿರುವ ರೈತರ ಪ್ರಮಾಣ ಶೇಕಡಾ 19.85 ಮಾತ್ರ. ಉಳಿದ ಸುಮಾರು 33 ಲಕ್ಷ ರೈತರು ಸುಮಾರು

42,000 ಕೋಟಿ ರೂ. ಬೆಳೆ ಸಾಲವನ್ನು ರಾಷ್ಟ್ರೀಕೃತ ಹಾಗೂ ವಾಣಿಜ್ಯ ಬ್ಯಾಂಕ್‍ಗಳಿಂದ ಪಡೆದಿದ್ದಾರೆ. ಸತತ ಆರು ವರ್ಷಗಳಿಂದ ರಾಜ್ಯವನ್ನು ಆವರಿಸಿರುವ ಬರ, ಅದರಲ್ಲೂ 2015-16 ಹಾಗೂ 2016-17 ನೇ ಸಾಲಿನಲ್ಲಿ ರಾಜ್ಯವು ಹಿಂದೆಂದೂ ಕಾಣದ ಅತ್ಯಂತ ಭೀಕರ ಬರ ಪರಿಸ್ಥಿತಿಯನ್ನು ಎದುರಿಸುತ್ತಿರುವ ಹಿನ್ನೆಲೆಯಲ್ಲಿ, ರಾಷ್ಟ್ರೀಕೃತ ಮತ್ತು ವಾಣಿಜ್ಯ ಬ್ಯಾಂಕ್‍ಗಳಿಂದ ರಾಜ್ಯದ ರೈತರು ಪಡೆದಿರುವ ಬೆಳೆ ಸಾಲದ ಅರ್ಧ ಭಾಗವನ್ನು ಮನ್ನಾ ಮಾಡಿದಲ್ಲಿ ಉಳಿದ ಅರ್ಧ ಭಾಗವನ್ನು ರಾಜ್ಯ ಸರ್ಕಾರ ಮನ್ನಾ ಮಾಡಲಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಮುಂಗಾರು ವೈಫಲ್ಯದಿಂದ 139 ತಾಲ್ಲೂಕುಗಳು ಹಾಗೂ ಹಿಂಗಾರು ವೈಫಲ್ಯದಿಂದ 160 ತಾಲ್ಲೂಕುಗಳು ಬರ ಪೀಡಿತ ಎಂದು ಘೋಷಿತವಾಗಿದೆ ಅಲ್ಲದೇ, ಸೆಪ್ಟೆಂಬರ್ ತಿಂಗಳಲ್ಲಿ ಹೈದರಾಬಾದ್-ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಅತೀವೃಷ್ಟಿ ಸಂಭವಿಸಿದೆ. ಇವೆಲ್ಲದರ ಒಟ್ಟಾರೆ ಪರಿಣಾಮ 27,000 ಕೋಟಿ ರೂ. ನಷ್ಟ ಸಂಭವಿಸಿದೆ. ರಾಷ್ಟ್ರೀಯ ಪ್ರಕೃತಿ ವಿಕೋಪ ಪರಿಹಾರ ನಿಧಿಯ ಮಾರ್ಗ ಸೂಚಿಗಳನ್ವಯ ಮುಂಗಾರು ಹಂಗಾಮಿಗೆ ಕೇಂದ್ರ ಸರ್ಕಾರವು 4702 ಕೋಟಿ ರೂ ನಷ್ಟ ಪರಿಹಾರ ಒದಗಿಸಬೇಕಾಗಿದೆ. ಅಲ್ಲದೆ, ಈ ಪೈಕಿ ಕೇಂದ್ರ ಸರ್ಕಾರವು ರಾಜ್ಯಕ್ಕೆ 1782 ಕೋಟಿ ರೂ. ಮಂಜೂರು ಮಾಡಿದೆ. ಅಂತೆಯೇ, ಪ್ರವಾಹ ಪರಿಸ್ಥಿತಿಯಿಂದ ರಾಜ್ಯದಲ್ಲಿ ಸಂಭವಿಸಿದ 386 ಕೋಟಿ ರೂ. ನಷ್ಟ ಪರಿಹಾರವನ್ನು ಕೇಂದ್ರ ಸರ್ಕಾರ ಈವರೆಗೂ ಬಿಡುಗಡೆ ಮಾಡಿಲ್ಲ. ಅಲ್ಲದೇ ರಾಜ್ಯದಲ್ಲಿನ ಹಿಂಗಾರು ಹಂಗಾಮಿನ ನಷ್ಟದ ಪ್ರಮಾಣ 3310 ಕೋಟಿ ರೂ. ಕುರಿತಂತೆ ಕೇಂದ್ರ ಅಧ್ಯಯನ ತಂಡ ಪರಿಶೀಲಿಸಿ ತನ್ನ ವರದಿ ಸಲ್ಲಿಸಬೇಕಿದೆ. ಅಂತೆಯೇ, ಕುಡಿಯುವ ನೀರು ಮತ್ತು ಮೇವು ಸರಬರಾಜಿಗೆ 800 ಕೋಟಿ ರೂ. ಬಿಡುಗಡೆ ಮಾಡುವಂತೆ ರಾಜ್ಯದ ಕಂದಾಯ ಸಚಿವರು ಮತ್ತು ಕೃಷಿ ಸಚಿವರು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಮನವಿ ಸಲ್ಲಿಸಿದ್ದಾರೆ. ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ 1800 ಅಡಿಗೆ ಕುಸಿದಿದೆ. ಮಲೆನಾಡು ಪ್ರದೇಶದ ಜಿಲ್ಲೆಗಳಲ್ಲೂ ಅಂತರ್ಜಲದ ಲಭ್ಯತೆ 1000 ಅಡಿಗೆ ಇಳಿದಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಮನವಿಗೆ ಸ್ಪಂದಿಸಲಿದೆ ಎಂಬ ಸದಾಶಯ ತಮ್ಮದಾಗಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

## ನನಸಾಗದ ಕನಸು !

ತಮಗೆ ಡಾಕ್ಟರ್ ಆಗಬೇಕೆಂಬ ಆಸೆ ಇತ್ತು. ತಮ್ಮ ತಂದೆಯ ಹೆಬ್ಬಯಕೆಯೂ ಕೂಡಾ ತಾವು ಡಾಕ್ಟರ್ ಆಗಬೇಕೆಂಬುದೇ ಆಗಿತ್ತು. ಆದರೆ ತಮಗೆ ಕಡಿಮೆ ಅಂಕ ಬಂದ ಹಿನ್ನೆಲೆಯಲ್ಲಿ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶಕ್ಕೆ ಸೀಟು ದೊರೆಯಲಿಲ್ಲ. ತಮ್ಮ ಕನಸು ನನಸಾಗಲಿಲ್ಲ ಎಂಬುದನ್ನು

ತಮ್ಮ ನೆನಪಿನ ಬುತ್ತಿಯಿಂದ ಹೊರ ಹಾಕಿದ ಸಿದ್ದರಾಮಯ್ಯ ಅವರು ವಿಜ್ಞಾನ ಪದವಿಯ ನಂತರ ಜೀವಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಅವಕಾಶ ವಂಚಿತರಾಗಿ ವ್ಯವಸಾಯ ಮಾಡಲು ಹಳ್ಳಿಗೆ ಹೋಗಿ ನೆರೆಯವರ ಜೊತೆ ಜಗಳವಾಡಿ ಮೈಸೂರಿಗೆ ಮರಳಿ ಕಾನೂನು ಪದವಿಗೆ ಪ್ರವೇಶವನ್ನು ಪಡೆದ ದಿನಗಳನ್ನು ಸ್ಮರಿಸಿದರು. ಬಡವರು ದುಬಾರಿ ಶುಲ್ಕ ತೆತ್ತು ವೈದ್ಯರಾಗಲು ಸಾಧ್ಯವಿಲ್ಲ ಎಂಬುದನ್ನು ಮನಗಂಡ ತಾವು ರಾಜ್ಯದಲ್ಲಿ ಆರು ಸರ್ಕಾರಿ ವೈದ್ಯಕೀಯ ಕಾಲೇಜುಗಳ ಪ್ರಾರಂಭಕ್ಕೆ ಚಾಲನೆ ನೀಡಿ 900 ಸೀಟುಗಳ ಹೆಚ್ಚಳಕ್ಕೆ ಕಾರಣರಾಗಿರುವುದಾಗಿ ತಿಳಿಸಿದರು. ಅಲ್ಲದೆ, ಮುಂಬರುವ ವರ್ಷಗಳಲ್ಲಿ ಮತ್ತೆ ಆರು ಸರ್ಕಾರಿ ವೈದ್ಯಕೀಯ ಕಾಲೇಜುಗಳು ಮೈದೇಳಲಿವೆ ಎಂಬ ಅಂಶವನ್ನು ಬಹಿರಂಗಪಡಿಸಿದರು.

## ಕಾನೂನು ಸುವ್ಯವಸ್ಥೆ ಉತ್ತಮ

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂಬ ಪ್ರತಿಪಕ್ಷಗಳ ಆರೋಪವನ್ನು ಅಂಕಿ–ಅಂಶಗಳ ಸಹಿತ ಸಾರಸಗಟಾಗಿ ತಳ್ಳಿಹಾಕಿದ ಸಿದ್ದರಾಮಯ್ಯ ಅವರು 2011–12 ರ ಅವಧಿಯಲ್ಲಿನ ಕೊಲೆ, ಸರಗಳ್ಳತನ, ಕಳ್ಳತನ ಅತ್ಯಾಚಾರ ಹಾಗೂ ಇತರೆ ಅಪರಾಧ ಪ್ರಕರಣಗಳ ಅಂಕಿ–ಅಂಶಗಳನ್ನು 2016 ನೇ ಸಾಲಿನ ಅಂಕಿ–ಅಂಶಗಳೊಂದಿಗೆ ತಾಳೆ ಮಾಡಿ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಉತ್ತಮವಾಗಿದೆ ಎಂಬುದನ್ನು ಪ್ರತಿಪಾದಿಸಿದರು.

## ಎಲ್ಲದರಲ್ಲೂ ಮೊದಲು

ವಿಶ್ವ ಆರ್ಥಿಕ ವೇದಿಕೆಯು ರಾಜ್ಯದ ರಾಜಧಾನಿ ಉದ್ಯಾನನಗರಿ ಬೆಂಗಳೂರನ್ನು ಅತ್ಯಂತ ಕ್ರಿಯಾಶೀಲ ನಗರಿ ಎಂದು ಘೋಷಿಸಿದೆ. ಇಡೀ ಭಾರತದಲ್ಲೇ ಸಾಂಸ್ಕೃತಿಕ ನಗರಿ ಮೈಸೂರು ಎರಡು ಬಾರಿ ಸ್ವಚ್ಛ ನಗರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಅಲ್ಲದೇ, ಕಳೆದ ಸಾಲಿನಲ್ಲಿ ನಡೆದ ಇನ್‌ವೆಸ್ಟ್ ಕರ್ನಾಟಕ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಹಾಗೂ ಪ್ರಸಕ್ತ ಸಾಲಿನಲ್ಲಿ ನಡೆದ ಪ್ರವಾಸಿ ಭಾರತೀಯ ದಿವಸ್‌ನಲ್ಲಿ 1,49,000 ಕೋಟಿ ರೂ. ಬಂಡವಾಳ ಹೂಡಿಕೆಗೆ ಆಸಕ್ತಿ, ಅಭಿವ್ಯಕ್ತಿ ಆಗಿರುವುದು ಇಡೀ ರಾಷ್ಟ್ರದಲ್ಲೇ ಬಂಡವಾಳ ಹೂಡಿಕೆಯಲ್ಲಿ ಕರ್ನಾಟಕ ಮೊದಲು ಎಂಬ ಕೀರ್ತಿ ಮತ್ತು ಗೌರವಕ್ಕೆ ಪಾತ್ರವಾಗಿದೆ ಎಂಬುದನ್ನು ಕೇಂದ್ರ ಸರ್ಕಾರದ ಕೈಗಾರಿಕಾ ನೀತಿ ಮತ್ತು ಉತ್ತೇಜನ ಇಲಾಖೆಯೇ ತಿಳಿಸಿರುವುದು ಕರ್ನಾಟಕವು ಎಲ್ಲದರಲ್ಲೂ ಮೊದಲು ಎಂಬುದನ್ನು ಮಾತ್ರವಲ್ಲ, ಕೈಗಾರಿಕಾ ಸ್ನೇಹಿ ರಾಜ್ಯ ಎಂಬುದನ್ನು ಸಾಬೀತು ಪಡಿಸುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ನಿಷ್ಕ್ರೀಯವಾಗಿದೆ, ಜಡತ್ವದಿಂದ ಕೂಡಿದೆ ಹಾಗೂ ಇನ್ನೂ ಟೇಕಾಫ್ ಆಗಿಲ್ಲ ಎಂಬ

ಪ್ರತಿಪಕ್ಷಗಳ ಆರೋಪಗಳು ಅರ್ಥಹೀನ, ಆಧಾರ–ರಹಿತ ಹಾಗೂ ಹುರುಳಿಲ್ಲದ್ದು ಎಂದು ಸಿದ್ದರಾಮಯ್ಯ ಅವರು ಸಮರ್ಥಿಸಿಕೊಂಡರು.

## ಪೊಲೀಸರಿಗೆ ಕೊಡುಗೆ

ರಾಜ್ಯದಲ್ಲಿ 579 ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ 14,033 ಕಾನ್ಸ್‌ಟೇಬಲ್ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಲಾಗಿದೆ. ಪೊಲೀಸರ ನೇಮಕಾತಿಗೆ ಆದ್ಯತೆ ನೀಡಿದ ತಮ್ಮ ಸರ್ಕಾರ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯಿಂದ ಸಬ್ ಇನ್ಸ್‌ಪೆಕ್ಟರ್‌ವರೆಗಿನ 11,000 ಅಧಿಕಾರಿ ಸಿಬ್ಬಂದಿಗೆ ಬಡ್ತಿ ನೀಡಲಾಗಿದೆ. ಪೊಲೀಸರಿಗೆ ನೀಡಲಾಗುತ್ತಿದ್ದ 100 ಭತ್ಯೆಯನ್ನು 2,100 ರೂ.ವರೆಗೆ ಹೆಚ್ಚಿಸಲಾಗಿದೆ. ಒಂದು ಸಾವಿರ ರೂ ತಪಾಸಣಾ ಭತ್ಯೆ ನೀಡಲಾಗುತ್ತಿದೆ. ಹೊಸ ಪೊಲೀಸ್ ಸ್ಟೇಷನ್‌ಗಳ ಸ್ಥಾಪನೆ, ಪೊಲೀಸರಿಗೆ ವಸತಿಗೃಹಗಳ ನಿರ್ಮಾಣ, ಮಿಲಿಟರಿಯಲ್ಲಿರುವಂತೆಯೇ ಪೊಲೀಸರಿಗೂ ಕ್ಯಾಂಟೀನ್ ಸೌಲಭ್ಯ ವಿಸ್ತರಣೆ ಹಾಗೂ ಪೊಲೀಸರ ಮಕ್ಕಳಿಗೆ ಕೇಂದ್ರಿಯ ವಿದ್ಯಾಲಯ ಮಾದರಿಯಲ್ಲಿ ಪೊಲೀಸ್ ಪಬ್ಲಿಕ್ ಶಾಲೆಗಳ ಪ್ರಾರಂಭ, ಕರ್ತವ್ಯದ ನಿಮಿತ್ತ ಹೊರ ಜಿಲ್ಲೆಗಳಿಂದ ಬೆಂಗಳೂರಿಗೆ ಆಗಮಿಸುವ ಪೊಲೀಸರಿಗೆ ಅತಿಥಿಗೃಹಗಳ ನಿರ್ಮಾಣ ಇವೆಲ್ಲವೂ ಪೊಲೀಸರಿಗೆ ನಮ್ಮ ಸರ್ಕಾರದ ಕೊಡುಗೆಗಳಾಗಿವೆ. ಈ ಬಾರಿಯ ಬಜೆಟ್‌ನಲ್ಲಿ ರಾಜ್ಯ ಸರ್ಕಾರದ ನೌಕರರ ವೇತನ ಪರಿಷ್ಕರಣೆಯ ಸಂದರ್ಭದಲ್ಲಿ ಪೊಲೀಸರ ವೇತನ ಪರಿಷ್ಕರಣೆಯನ್ನೂ ಪರಿಗಣಿಸಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು.

## ಅಗತ್ಯ ಸೇವಾ ಇಲಾಖೆಗಳ ಖಾಲಿ ಹುದ್ದೆಗಳ ಭರ್ತಿ

ತಮ್ಮ ಸರ್ಕಾರ ಶಿಕ್ಷಣ ಇಲಾಖೆಯಲ್ಲಿ 7,900 ಪ್ರಾಥಮಿಕ ಶಾಲಾ ಶಿಕ್ಷಕರನ್ನು ಹಾಗೂ 1,700 ಪದವಿ ಪೂರ್ವ ಶಿಕ್ಷಕರನ್ನು ನೇಮಕ ಮಾಡಿದೆ. ಅಂತೆಯೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 597 ತಜ್ಞ ವೈದ್ಯರನ್ನು, 157 ವೈದ್ಯರನ್ನು, 6270 ದಂತ ವೈದ್ಯರನ್ನು ಹಾಗೂ 7517 ಅರೆ ವೈದ್ಯಕೀಯ ಸಿಬ್ಬಂದಿಯನ್ನು ಒಳಗೊಂಡಂತೆ 14,544 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಅಗತ್ಯ ಸೇವೆಗಳ ಎಲ್ಲಾ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವತ್ತ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅವರು ವಿವರಿಸಿದರು.

## ನೀರಾವರಿ : ಮುಂದಿನ ಐದು ವರ್ಷಗಳಲ್ಲಿ ಪೂರ್ಣಗೊಳಿಸಲು ಕ್ರಿಯಾ ಯೋಜನೆ

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಪ್ರತಿ ವರ್ಷ 10,000 ಕೋಟಿ ರೂ ಗಳಂತೆ ರಾಜ್ಯದ ಎಲ್ಲಾ ನೀರಾವರಿ ಯೋಜನೆಗಳಿಗೆ 50,000 ಕೋಟಿ ರೂ ವೆಚ್ಚ ಮಾಡುತ್ತೇವೆ

ಎಂದು ಘೋಷಿಸಿದ್ದೆ ಎಂಬುದನ್ನು ಪುನರುಚ್ಚರಿಸಬಯಸುತ್ತೇನೆ. ಅಲ್ಲದೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೊದಲನೇ ವರ್ಷದ ನನ್ನ ಆಯವ್ಯಯ ಭಾಷಣದಲ್ಲಿ *50,000 ಕೋಟಿ ರೂ. ಅಂದಾಜು ವೆಚ್ಚದಲ್ಲಿ 9,25,805 ಹೆಕ್ಟೇರ್ ನೀರಾವರಿ ಕ್ಷೇತ್ರ ಸಾಧಿಸಲು ಚಾಲ್ತಿಯಲ್ಲಿರುವ ಕಾಮಗಾರಿಗಳನ್ನು ಮುಂದಿನ ಐದು ವರ್ಷಗಳಲ್ಲಿ ಪೂರ್ಣಗೊಳಿಸಲು ಕ್ರಿಯಾ ಯೋಜನೆಯನ್ನು ತಯಾರಿಸಲಾಗುವುದು ಎಂದು ಹೇಳಿರುವುದನ್ನು ಮತ್ತೊಮ್ಮೆ ಸದನದ ಗಮನಕ್ಕೆ ತರಬಯಸುತ್ತೇನೆ.*

### *ಮಾರ್ಚ್ ಅಂತ್ಯದೊಳಗೆ ಒಂದು ಸಾವಿರ ಶುದ್ಧ ಕುಡಿಯುವ ನೀರು ಘಟಕ ಸ್ಥಾಪನೆ*

ರಾಜ್ಯದಲ್ಲಿ ಪ್ರಸ್ತುತ 8,500 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದೆ. ಮಾರ್ಚ್ ಅಂತ್ಯದ ವೇಳೆಗೆ ಒಂದು ಸಾವಿರ ಶುದ್ಧ ಕುಡಿಯುವ ನೀರು ಘಟಕಗಳನ್ನೂ ಸ್ಥಾಪಿಸಲು ಕ್ರಮ ವಹಿಸಲಾಗಿದೆ. ಒಟ್ಟಾರೆ ಮುಂದಿನ ವರ್ಷದ ಅಂತ್ಯದ ವೇಳೆಗೆ 10,000 ಶುದ್ಧ ಕುಡಿಯುವ ನೀರು ಘಟಕಗಳನ್ನು ಸ್ಥಾಪಿಸುವ ಗುರಿ ಸಾಧಿಸಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

### ಡಿಜಿಟಲ್ ಸಹಿಗೆ ಕಾಲಾವಧಿ ಕಡಿತ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪರಿಣಾಮಕಾರಿ ಅನುಷ್ಠಾನವನ್ನು ಗಮನಿಸಿ ರಾಜ್ಯಕ್ಕೆ ನೀಡಲಾಗಿದ್ದ ಆರು ಕೋಟಿ ಮಾನವ ದಿನಗಳನ್ನು ಕೇಂದ್ರ ಸರ್ಕಾರ ಹತ್ತು ಕೋಟಿ ಮಾನವ ದಿನಗಳಿಗೆ ಹೆಚ್ಚಿಸಿದೆ. ಈ ಯೋಜನೆಗೆ ಮೀಸಲಿರಿಸಿರುವ 2100 ಕೋಟಿ ರೂ. ಅನುದಾನವನ್ನು ಮಾರ್ಚ್ ಅಂತ್ಯದೊಳಗೆ ಸಂಪೂರ್ಣವಾಗಿ ಬಳಸಿಕೊಳ್ಳಲು ಯೋಜಿಸಲಾಗಿದೆ. ಈ ಯೋಜನೆಯಡಿ ಕೇಂದ್ರ ಸರ್ಕಾರದ ಪಾಲು ಶೇಕಡಾ 90 ಹಾಗೂ ರಾಜ್ಯ ಸರ್ಕಾರದ ಪಾಲು ಶೇಕಡಾ 10. ಈವರೆಗೆ ಕೇಂದ್ರ ಸರ್ಕಾರದ ಪಾಲು ಬಿಡುಗಡೆ ಆಗದಿದ್ದರೂ ಬರದಿಂದ ಬಳಲುತ್ತಿರುವ ಪ್ರದೇಶದ ಜನರಿಗೆ ಉದ್ಯೋಗ ದೊರಕಿಸಿಕೊಡಬೇಕೆಂಬ ಸದುದ್ದೇಶದಿಂದ ಕೇಂದ್ರ ಸರ್ಕಾರದ ಪಾಲನ್ನು ನಿರೀಕ್ಷಿಸಿ ರಾಜ್ಯ ಸರ್ಕಾರವೇ 1165 ಕೋಟಿ ರೂ. ಬಿಡುಗಡೆ ಮಾಡಿದೆ. ಗ್ರಾಮ ಪಂಚಾಯಿತಿ ಅಧ್ಯಕ್ಷರ ಡಿಜಿಟಲ್ ಸಹಿಗೆ ನೀಡಲಾಗಿದ್ದ ಏಳು ದಿನಗಳ ಕಾಲಾವಧಿಯನ್ನು ಮೂರು ದಿನಗಳಿಗೆ ಕಡಿತಗೊಳಿಸಿ ಸಕಾಲಿಕ ಕೂಲಿ ಸಂದಾಯಕ್ಕೆ ಅನುವು ಮಾಡಿಕೊಡಲಾಗಿದೆ.

### ಕೆರೆ ಸಂಜೀವಿನಿ

ಬರ ಪರಿಸ್ಥಿತಿಯ ಹಿನ್ನಲೆಯಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಭವಿಷ್ಯದ ದಿನದಲ್ಲಿ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ಮೂಲಗಳನ್ನು ಪುನರುಜ್ಜೀವನಗೊಳಿಸಲು 50 ಕೋಟಿ ರೂ ಗಳಲ್ಲಿ ಕೆರೆ ಸಂಜೀವಿನಿ–2 ಯೋಜನೆ ಜಾರಿಗೆ ತರಲಾಗಿದೆ.

ಇದರಲ್ಲಿ ಮೊದಲ ಹಂತದಲ್ಲಿ ಮಳೆಯ ಕಾರಣದಿಂದ ಸ್ಥಗಿತಗೊಂಡಿದ್ದ 351 ಕೆರೆಗಳನ್ನು ಪೂರ್ಣಗೊಳಿಸಲು 21.76 ಕೋಟಿ ರೂ ಗಳನ್ನು ಮತ್ತು ಹೊಸ ಕೆರೆಗಳನ್ನು 28.24 ಕೋಟಿ ರೂ ಗಳಲ್ಲಿ ಈಗಾಗಲೇ 903 ಕೆರೆಗಳನ್ನು ಆಯ್ಕೆ ಮಾಡಿ ಅಭಿವೃದ್ದಿ ಪಡಿಸಲು ಕ್ರಮ ಕೈಗೊಳ್ಳಲಾಗಿದೆ ಮತ್ತು ಇದಕ್ಕಾಗಿ ಮೊದಲ ಕಂತಿನಲ್ಲಿ 10.00 ಕೋಟಿ ರೂ ಗಳನ್ನು ಬಿಡುಗಡೆ ಮಾಡಲಾಗಿದೆ. ಉಳಿದ 40.00 ಕೋಟಿ ರೂ ಗಳನ್ನು ಅನುದಾನವನ್ನು ಪ್ರಗತಿಯನ್ನಾಧರಿಸಿ ಬಿಡುಗಡೆ ಮಾಡಲಾಗುವುದು.

**ಬರ ನಿರ್ವಹಣೆ : ಅನುದಾನಕ್ಕೆ ಬರವಿಲ್ಲ !**

ಮೊದಲನೇ ಹಂತದಲ್ಲಿ ಶಾಸಕರ ಅಧ್ಯಕ್ಷತೆಯ ಕಾರ್ಯಪಡೆ (ಟಾಸ್ಕ್‌ಫೋರ್ಸ್)ಸಮಿತಿಗೆ ಜೂನ್ ತಿಂಗಳಲ್ಲಿ ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರಕ್ಕೆ 50 ಲಕ್ಷ ರೂ ನಂತೆ 189 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಿಗೆ 94.50 ಕೋಟಿ ರೂ ಅನುದಾನ ಬಿಡುಗಡೆ ಮಾಡಲಾಗಿದೆ. ಇದರಡಿ 6,930 ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಪೂರ್ಣಗೊಳಿಸಿ ಅನುದಾನವನ್ನು ಪೂರ್ಣವಾಗಿ ವೆಚ್ಚಮಾಡಲಾಗಿದೆ.

ಎರಡನೇ ಹಂತದಲ್ಲಿ ಶಾಸಕರ ಅಧ್ಯಕ್ಷತೆಯ ಕಾರ್ಯಪಡೆ ಸಮಿತಿಗೆ ನವೆಂಬರ್ ತಿಂಗಳಲ್ಲಿ 139 ಬರ ಪೀಡಿತ ತಾಲ್ಲೂಕುಗಳ ವ್ಯಾಪ್ತಿಯ 154 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಿಗೆ ಪ್ರತಿ ಕ್ಷೇತ್ರಕ್ಕೆ 60 ಲಕ್ಷ ರೂ ನಂತೆ ಹಾಗೂ ಉಳಿದ 35 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಿಗೆ 40 ಲಕ್ಷ ರೂ ನಂತೆ ಒಟ್ಟು 106.40 ಕೋಟಿ ರೂ ಗಳನ್ನು ಬಿಡುಗಡೆ ಮಾಡಲಾಗಿದೆ. ಇದರಡಿ 7,390 ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಈ ಪೈಕಿ 4,348 ಕಾಮಕಾರಿಗಳನ್ನು ಪೂರ್ಣಗೊಳಿಸಲಾಗಿದೆ. ಒಟ್ಟಾರೆ ಕುಡಿಯುವ ನೀರು ಪೂರೈಕೆಗೆ ಏಪ್ರಿಲ್‌ನಿಂದ ಈವರಗೆ 1144 ಕೋಟಿ ರೂ. ವೆಚ್ಚ ಮಾಡಲಾಗಿದೆ. ಜನರಿಗಾಗಲಿ ಅಥವಾ ಜಾನುವಾರುಗಳಿಗಾಗಲಿ ಔಷಧಿ ಇಲ್ಲ ಎಂದು ಹೇಳಬಾರದು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಕುಡಿಯುವ ನೀರು ಪೂರೈಕೆ ಹಾಗೂ ಮೇವು ಸರಬರಾಜು ಒಳಗೊಂಡಂತೆ ಬರ ನಿರ್ವಹಣೆಗೆ ಅನುದಾನಕ್ಕೆ ಬರವಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಕರ್ನಾಟಕವನ್ನು ಗುಡಿಸಲು ಮುಕ್ತ ರಾಜ್ಯವನ್ನಾಗಿ ಮಾಡಲು ಪಣ ತೊಟ್ಟಿರುವ ತಮ್ಮ ಸರ್ಕಾರ 15 ಲಕ್ಷ ಮನೆಗಳ ನಿರ್ಮಾಣ ಗುರಿಗೆ ಪ್ರತಿಯಾಗಿ 10.5 ಲಕ್ಷ ಮನೆಗಳನ್ನು

ಈಗಾಗಲೇ ನಿರ್ಮಿಸಿದೆ. ಸರ್ಕಾರದ ಅವಧಿ ಮುಕ್ತಾಯವಾಗುವ ಮುನ್ನ ಉಳಿದ ಮನೆಗಳನ್ನು ನಿರ್ಮಿಸಿ ನಿಗಧಿತ ಗುರಿ ಸಾಧಿಸಲಿದೆ.

ಅನ್ನಭಾಗ್ಯ ಯೋಜನೆ ಗುಳೆ ಹೋಗುವ ಸಂಖ್ಯೆಯನ್ನು ಕಡಿಮೆ ಮಾಡಿದೆ. ಕ್ಷೀರಭಾಗ್ಯ ಯೋಜನೆಯಿಂದ ಅಪೌಷ್ಠಿಕತೆ ಇಳಿಮುಖವಾಗಿದೆಯಲ್ಲದೇ, ಶಾಲಾ ಹಾಜರಾತಿ ಪ್ರಮಾಣ ಹೆಚ್ಚಾಗಿದೆ. ಶಿಕ್ಷಣ ಹಕ್ಕು ಕಾಯಿದೆಯ ನೆರವಿನಿಂದ ಆರ್ಥಿಕವಾಗಿ ದುರ್ಬಲವರ್ಗದ ಕುಟುಂಬಗಳ 4.5 ಲಕ್ಷ ಮಕ್ಕಳು ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶ ಪಡೆದಿದ್ದಾರೆ. ವಿದ್ಯಾಸಿರಿ, ವಸತಿ ಮತ್ತು ಭೋಜನ ಸಹಾಯ ಯೋಜನೆಯ ಲಾಭ ಒಂದು ಲಕ್ಷ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆಯಲು ನೆರವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರ ಶ್ರೇಯೋಭಿವೃದ್ಧಿಗೆ ರೂಪಿಸಿರುವ ವಿವಿಧ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ವಿಶೇಷ ಕಾಯಿದೆ ಅನುಷ್ಠಾನಗೊಳಿಸಲಾಗಿದೆ. ಅಲ್ಲದೆ, 60,000 ಕೋಟಿ ರೂ ಅನುದಾನ ಬಿಡುಗಡೆ ಮಾಡಿ, 44,000 ಕೋಟಿ ರೂ ವೆಚ್ಚ ಮಾಡಲಾಗಿದೆ. ಇವೆಲ್ಲವೂ ರಾಜ್ಯದಲ್ಲಿ ಸುಸ್ಥಿರ ಅಭಿವೃದ್ಧಿ ಹಾಗೂ ಒಳಗೊಂಡ ಅಭಿವೃದ್ಧಿಗೆ ಪ್ರೇರಣೆ ನೀಡಿ ಉತ್ತಮ ವಾತಾವರಣ ಕಲ್ಪಿಸಿದೆ. ತಮ್ಮ ಸರ್ಕಾರ ಪ್ರಾಮಾಣಿಕವಾಗಿ ಹಾಗೂ ಪಾರದರ್ಶಕವಾಗಿ ಜನರ ನಿರೀಕ್ಷೆಗೆ ಅನುಗುಣವಾಗಿ ಕಾರ್ಯ ನಿರ್ವಹಿಸುತ್ತದೆ. ಸರ್ಕಾರ ನಡೆದ ದಾರಿ ಸ್ಪಷ್ಟ ಹಾಗೂ ಗುರಿ ನಿರ್ಧಿಷ್ಟ ಎಂದು ಮುಖ್ಯಮಂತ್ರಿ ವಿವರಿಸಿದರು.

ನೋಟು ಅಮಾನ್ಯೀಕರಣದ ನಂತರ, ಕೇಂದ್ರದ ಭಾರತೀಯ ಜನತಾ ಪಕ್ಷದ ಸರ್ಕಾರ ರಾಜ್ಯದ ಕಾಂಗ್ರೆಸ್ ನಾಯಕರನ್ನು ಗುರಿಯಾಗಿಸಿಕೊಂಡು ರಾಜಕೀಯ ಷಡ್ಯಂತ್ರ ನಡೆಸುತ್ತಿದೆ ಎಂಬ ಮುಖ್ಯಮಂತ್ರಿಯವರ ಹೇಳಿಕೆಗೆ ಸದನದಲ್ಲಿ ಭಾರತೀಯ ಜನತಾ ಪಕ್ಷ ತೀವ್ರ ಆಕ್ರೋಶ, ಮಾತಿನ ಚಕಮಕಿ ಉಂಟಾಯಿತು. ಬಿ ಜೆ ಪಿ ಶೇಮ್ ಶೇಮ್ ಎಂಬ ಆಡಳಿತ ಪಕ್ಷದ ಸದಸ್ಯರ ಘೋಷಣೆ ಏರಿದ ಧ್ವನಿಯಲ್ಲಿ ಹೊರ ಹೊಮ್ಮಿದಾಗ ಪ್ರತಿಪಕ್ಷ ನಾಯಕ ಜಗದೀಶ್ ಶೆಟ್ಟರ್ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು.

ನಂತರ, ರಾಜ್ಯಪಾಲರಿಗೆ ಗೌರವಪೂರ್ವಕ ವಂದನಾ ನಿರ್ಣಯ ಸಲ್ಲಿಸುವ ಪ್ರಸ್ತಾವಕ್ಕೆ ಧ್ವನಿ ಮತದಿಂದ ಸದನವು ಅಂಗೀಕರಿಸಿತು. ನಿರ್ಣಯದ ಪ್ರತಿಯನ್ನು ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು ಎಂದು ಸಭಾಧ್ಯಕ್ಷರು ಪ್ರಕಟಿಸಿದರು.

***********

ಡಿ ಪಿ ಎಂ : ಟಿ ಸಿ ಎಂ ಬಿ